**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

ಸಂಖ್ಯೆ: ಪಪೂಶಿಇ/ಫರೀಕ್ಷೆ/ಮೌ.ಮಾ/2018-19. ದಿನಾಂಕ:19.03.2019

## ಜ್ಞಾಪನ

ದ್ವಿತೀಯ ಪಿಯುಸಿ ಪರೀಕ್ಷೆಗಳ ಉತ್ತರಪತ್ರಿಕೆಗಳ ಮೌಲ್ಯಮಾಪನ ಕಾರ್ಯ ಪ್ರಾರಂಭವಾಗಲಿದ್ದು, ಈಗಾಗಲೇ 18005 ಸಹಾಯಕ ಮೌಲ್ಯಮಾಪಕರು ಹಾಗೂ 3114 ಉಪಮುಖ್ಯ ಮೌಲ್ಯಮಾಪಕರುಗಳಿಗೆ ನೇಮಕಾತಿ ಆದೇಶ ಕಳುಹಿಸಲಾಗಿದೆ. ಈಗಾಗಲೇ ಎಲ್ಲಾ ಪ್ರಾಂಶುಪಾಲರುಗಳಿಗೆ ಆನ್‌ಲೈನ್ ಮುಖಾಂತರ ಸಹಾಯಕ ಮೌಲ್ಯಮಾಪಕರು ಹಾಗೂ ಸಹಮುಖ್ಯ ಮೌಲ್ಯಮಾಪಕರು ನೇಮಕಾತಿ ಪಟ್ಟಿಯನ್ನು ದಿನಾಂಕ 16.03.2019 ರಂದು ಆನ್‌ಲೈನ್ ಪೋರ್ಟಲ್‌ನಲ್ಲಿ ಕಳುಹಿಸಲಾಗಿದೆ.

ಸದರಿ ಮೌಲ್ಯಮಾಪನ ನೇಮಕಾತಿ ಆದೇಶಗಳನ್ನು ಪ್ರಾಂಶುಪಾಲರುಗಳು ಕೂಡಲೇ ಡೌನ್‌ಲೋಡ್ ಮಾಡಿಕೊಂಡು ಸಂಬಂಧಪಟ್ಟ ಉಪನ್ಯಾಸಕರುಗಳಿಗೆ ತಲುಪಿಸುವ ವ್ಯವಸ್ಥೆ ಮಾಡುವುದು. ಯಾವುದೇ ಮೌಲ್ಯಮಾಪಕರು ಕರ್ತವ್ಯಕ್ಕೆ ಹಾಜರಾಗದೇ ಉಳಿಯುವ ಸಂದರ್ಭದಲ್ಲಿ ಪ್ರಾಂಶುಪಾಲರನ್ನು ಹೊಣೆಗಾರರನ್ನಾಗಿಸಲಾಗುವುದು. ಮೌಲ್ಯಮಾಪನ ಕಾರ್ಯವು ಒಂದು ಸೂಕ್ಷ್ಮ ಹಾಗೂ ಅತ್ಯಂತ ಪ್ರಮುಖ ಜವಾಬ್ದಾರಿಯಾಗಿದ್ದು, ಈ ಕಾರ್ಯವನ್ನು ಅತ್ಯಂತ ಶ್ರದ್ಧೆ ಹಾಗೂ ಜಾಗರೂಕತೆಯಿಂದ ನೆರವೇರಿಸಲು ಎಲ್ಲಾ ರೀತಿಯ ಕ್ರಮ ತೆಗೆದುಕೊಳ್ಳಲು ಎಲ್ಲಾ ಪ್ರಾಂಶುಪಾಲರಿಗೂ ಈ ಮೂಲಕ ತಿಳಿಸಲಾಗಿದೆ.

**ಮೌಲ್ಯಮಾಪನ ಕಾರ್ಯಕ್ಕೆ ಗೈರುಹಾಜರು / ಉಪನ್ಯಾಸಕರಿಗೆ ಮೌಲ್ಯಮಾಪನ ಆದೇಶ ವಿತರಿಸದಿದ್ದರೆ / ಮೌಲ್ಯಮಾಪನ ಕಾರ್ಯಕ್ಕೆ ಯಾವುದೇ ವ್ಯಕ್ತಿ ಅಡ್ಡಿಪಡಿಸಿದರೆ, ಕಾನೂನು ಹಾಗೂ ಶಿಕ್ಷಣ ಕಾಯ್ದೆಯ ನಿಯಮಗಳ ಪ್ರಕಾರ ಕೆಳಕಂಡ ಶಿಕ್ಷೆಗೆ ಒಳಪಡಬೇಕಾಗುತ್ತದೆ.**

1. ಶಿಕ್ಷಣ ಕಾಯ್ದೆಯ ಸೆಕ್ಷನ್ 28 ರನ್ವಯ ಮೌಲ್ಯಮಾಪನ ಕಾರ್ಯಕ್ಕೆ ಹಾಜರಾತಿ ಕಡ್ಡಾಯವಾಗಿದೆ. ಸದರಿ ಕಾಯ್ದೆಯ ಸೆಕ್ಷನ್ 122 ರನ್ವಯ ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಲು ನಿರಾಕರಿಸಿದರೆ ಅಥವಾ ಕರ್ತವ್ಯಕ್ಕೆ ಹಾಜರಾಗದಿದ್ದರೆ, 1 ವರ್ಷ ಸೆರೆವಾಸ ಅಥವಾ ಹತ್ತು ಸಾವಿರ ರೂಪಾಯಿ ದಂಡ ಅಥವಾ ಎರಡು ರೀತಿ ದಂಡ ವಿಧಿಸಲಾಗುತ್ತದೆ.
2. ಶಿಕ್ಷಣ ಕಾಯ್ದೆಯ 137ನೇ ಸೆಕ್ಷನ್ ಪ್ರಕಾರ ಪರೀಕ್ಷಾ ಕಾರ್ಯ ನಿರಾಕರಣೆ ಗೈರುಹಾಜರಿ ಒಂದು ಗಮನಾರ್ಹ ಹಾಗೂ ಜಾಮಿನು ರಹಿತ ಅಪರಾಧವಾಗಿರುತ್ತದೆ..
3. ಶಿಕ್ಷಣ ಕಾಯ್ದೆಯ 138ನೇ ಸೆಕ್ಷನ್ ಪ್ರಕಾರ ಯಾವುದೇ ಅಧಿಕಾರಿ / ಪ್ರಾಂಶುಪಾಲರು ಉಪನ್ಯಾಸಕರು ಮೌಲ್ಯಮಾಪನ ಕಾರ್ಯವನ್ನು ಅಪೂರ್ಣಗೊಳಿಸುವ ಯಾವುದೇ ಕಾರ್ಯಕ್ಕೆ ಪ್ರಚೋದಿಸಿದರೆ ಅಂತಹ ಅಧಿಕಾರಿ ಪ್ರಾಂಶುಪಾಲರು / ಉಪನ್ಯಾಸಕರ ವಿರುದ್ಧ ಸೆಕ್ಷನ್ 122ರಡಿ ಶಿಕ್ಷೆ ವಿಧಿಸಲಾಗುವುದು.

ಈ ಮೇಲ್ಕಂಡ ಕಾನೂನಾತ್ಮಕ ನಿಯಮಗಳ ಬಗ್ಗೆ ಮೌಲ್ಯಮಾಪಕರಿಗೆ ಅರಿವು ಮೂಡಿಸುವುದರ ಜೊತೆಗೆ ಮೌಲ್ಯಮಾಪನ ಆದೇಶ ಪಡೆದ ಪ್ರಾಂಶುಪಾಲರು ಮತ್ತು ಉಪನ್ಯಾಸಕರು ಕಡ್ಡಾಯವಾಗಿ ಮೌಲ್ಯಮಾಪನ ಕರ್ತವ್ಯಕ್ಕೆ ಹಾಜರಾಗುವುದು.

ರಾಜ್ಯದ ಎಲ್ಲಾ ಪದವಿ ಪೂರ್ವ
ಕಾಲೇಜುಗಳ ಪ್ರಾಂಶುಪಾಲರುಗಳಿಗೆ,

ನಿರ್ದೇಶಕರು (ಪರೀಕ್ಷೆ), 19/3
ಪದವಿ ಪೂರ್ವ ಶಿಕ್ಷಣ ಇಲಾಖೆ.